SEVA BHARATHI
सेवा ही परमो धर्मः

ಸಂಚಿಕೆ : 08
ಸಂಪುಟ : 05

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಆಗಸ್ಟ್ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ಸೆಲ್ಕೋ ಫೌಂಡೇಶನ್‌ನಿಂದ 25 ಮಂದಿ ಅರ್ಹ ಫಲಾನುಭವಿಗಳಿಗೆ ಸೋಲಾರ್ ಕಿಟ್‌ಗಳ ಹಸ್ತಾಂತರ

## ಸೇವಾಭಾರತಿ ನೀರ್ಚಾಲು ಸಂಸ್ಥೆಗೆ ವೈದ್ಯಕೀಯ ಪರಿಕರಗಳ ಹಸ್ತಾಂತರ

## ಭಾರತೀಯ ಮಜ್ದೂರ್ ಸಂಘದ ರಾಷ್ಟ್ರೀಯ ಪ್ರಮುಖರಿಂದ ಸೇವಾಧಾಮಕ್ಕೆ ಭೇಟಿ

## ಪುಂಜಾಲಕಟ್ಟೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಾಗಾರ

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಜೀವನ ರೂಪಿಸಿದ ಪುರೋಹಿತ ವೃತ್ತಿ

ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಸೆಲ್ಕೋ ಫೌಂಡೇಶನ್‌ನವರು ನಮ್ಮ 25 ಮಂದಿ ದಿವ್ಯಾಂಗರಿಗೆ ಅವರ ದೀರ್ಘಾವಧಿ ಒತ್ತಡಗಾಯ ಗುಣವಾಗಲು ಸೋಲಾರ್ ಸೆಟ್‌ಗಳನ್ನು ಅಧಿಕೃತವಾಗಿ ಹಸ್ತಾಂತರ ಮಾಡಿರುತ್ತಾರೆ. ಒಟ್ಟಿನಲ್ಲಿ ನಾವೆಲ್ಲರೂ ಆ ಸಂಸ್ಥೆಗೆ ಋಣಿ. ನಾವಂತೂ ಸಂಕಲ್ಪ ಮಾಡಬೇಕಿದೆ ಒತ್ತಡಗಾಯ ರಹಿತ ಜೀವನಕ್ಕಾಗಿ ಏನೆಲ್ಲ ಮುಂಜಾಗ್ರತೆ ಮಾಡಬೇಕು ಅದನ್ನು ಮಾಡಿಯೇ ಮಾಡುತ್ತೇವೆ ಎಂದು.

ಮುಂದಿನ ತಿಂಗಳು ಅಂತರಾಷ್ಟ್ರೀಯ ಬೆನ್ನುಹುರಿ ಅಪಘಾತ ದಿನವನ್ನು ಆಚರಣೆ ಮಾಡಲು ಯೋಜನೆ ರೂಪಿಸಿರುತ್ತೇವೆ. ಉಡುಪಿಯ ಜಿಲ್ಲಾ ಆರೋಗ್ಯ ಕೇಂದ್ರದಲ್ಲಿ 3 ದಿನಗಳ ಆರೋಗ್ಯ ಶಿಬಿರ ಆಯೋಜಿಸಲು ಯೋಜಿಸಿದ್ದೇವೆ. ಕೇಂದ್ರದ ಜಿಲ್ಲಾ ಆರೋಗ್ಯ ಅಧಿಕಾರಿಯವರು ಪೂರ್ಣ ರೀತಿಯ ಸಹಕಾರ ನೀಡುತ್ತಿದ್ದು ಶಿಬಿರ ಯಶಸ್ವಿಗೆ ನಾವೆಲ್ಲರೂ ಪರಿಶ್ರಮ ಪಡುತ್ತಿದ್ದೇವೆ. ಪ್ರಾಯಶಃ ಇದು ಮೊಟ್ಟ ಮೊದಲ ಸಹಕಾರ ಇಲಾಖೆಯಿಂದ ಸಿಕ್ಕಿರುವುದು ಎಂದು ತಿಳಿಸಲು ಹರ್ಷವಾಗುತ್ತಿದೆ.

ಈ ಶಿಬಿರದಲ್ಲಿ ವಕಾಲತ್ತಿನ ಬಗ್ಗೆ ಒತ್ತುಕೊಡಲಿದ್ದೇವೆ. ಫಲಾನುಭವಿಗಳೆಲ್ಲರಿಗೂ ಆರೋಗ್ಯ ತಪಾಸಣೆ, ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಮತ್ತು ತರಬೇತಿ ದೊರಕಲಿದೆ. ಇಲಾಖಾ ಅಧಿಕಾರಿಗಳು ಮಾರ್ಗದರ್ಶನ ಮಾಡಲಿದ್ದು ಗಾಲಿಕುರ್ಚಿ ಜಾಥಾ ನಡೆಯಲಿದೆ. ಜನಪ್ರತಿನಿಧಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಜೋಡಿಸಿಕೊಳ್ಳಲಾಗಿದೆ. ಸಾಧನ ಸಲಕರಣೆ ವಿತರಣೆಯೂ ಇದೆ.

ಇದನ್ನು ಹೊರತುಪಡಿಸಿ ಪುತ್ತೂರಿನಲ್ಲಿ ಮೂರು ದಿನಗಳ ಶಿಬಿರ ಉಜಿರೆಯಲ್ಲಿ ಗಾಲಿಕುರ್ಚಿ ಜಾಥಾ ಹಮ್ಮಿಕೊಳ್ಳಲು ಯೋಜನೆ ರೂಪಿಸಿದ್ದೇವೆ. ಒಟ್ಟಿನಲ್ಲಿ ಫಲಾನುಭವಿಗಳಿಗೆ ಅಗತ್ಯವಿರುವುದನ್ನು ಪೂರೈಸುವುದು ಹಾಗೂ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸುವಂತಹ ಕಾರ್ಯ ನಿರಂತರ ಸಾಗಲು ನಮ್ಮ ಶತಪ್ರಯತ್ನವಿದೆ.

ಇಪ್ಪತ್ತೆಂಟುವರೆ ವರ್ಷಗಳ ಮೊದಲು ನಾನು ಬೆನ್ನುಹುರಿ ಅಪಘಾತಗೊಂಡು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಮೂರು ತಿಂಗಳುಗಳ ಕಾಲ ದಾಖಲಾಗಿದ್ದೆ. ICUನಲ್ಲಿ ನನ್ನನ್ನು ಅಕ್ಕನಂತೆ ಸಾಕಿ ಸಲುಹಿದ ಮೇರಿ ಸಿಸ್ಟರ್ ಹಾಗೂ ಫಿಸಿಯೋಥೆರಪಿಸ್ಟ್ ಆಗಿದ್ದ ಸಿಸ್ಟರ್ ಲೀನಸ್‌ರವರು ನಮ್ಮ ಕಾರ್ಯಾಲಯ ಮತ್ತು ಕೇಂದ್ರಕ್ಕೆ ಭೇಟಿ ನೀಡಿ ಶುಭಹಾರೈಸಿರುವುದು ನನ್ನ ಬಾಳಿನ ಸುದೈವ ದಿನವಾಗಿತ್ತು. ಶಾರೀರಿಕ ಹಾಗೂ ಮಾನಸಿಕವಾಗಿ ಜರ್ಜರಿತವಾಗಿದ್ದ ನನಗೆ ಯಥಾ ಜೀವನಕ್ಕೆ ಹೊಂದಿಕೊಳ್ಳಲು ಅವರ ಮಾರ್ಗದರ್ಶನ, ಸಹಕಾರ ಹಾಗೂ ಬೆಂಬಲಗಳೇ ಆಧಾರವಾಗಿತ್ತು.

ಮುಂದಿನ ತಿಂಗಳು ಗಣೇಶ ಹಬ್ಬದ ಸಂಭ್ರಮ ತಮಗೆಲ್ಲರಿಗೂ ಗಣೇಶ ಸಕಲೈಶ್ವರ್ಯಗಳನ್ನು ಕರುಣಿಸುತ್ತಿರಲಿ.

*ಸೇವಾ ಹೀ ಪರಮೋ ಧರ್ಮಃ*

ಇತೀ ತಮ್ಮವ, ಕೆ. ವಿನಾಯಕ ರಾವ್

## ನಮ್ಮ ವಿಳಾಸ


**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888


## ನಮ್ಮ ತಂಡ


ಶ್ರೀಮತಿ ಸ್ವರ್ಣಗೌರಿ – ಅಧ್ಯಕ್ಷರು
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀ ಕೆ. ಬಾಲಕೃಷ್ಣ – ಕಾರ್ಯದರ್ಶಿ
ಶ್ರೀ ಕೆ. ವಿನಾಯಕ ರಾವ್ – ಖಜಾಂಚಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಟ್ರಸ್ಟಿ
ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ – ಟ್ರಸ್ಟಿ


## ಸಲಹಾ ಮಂಡಳಿ


1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ವಿಜಯ ಕೊಡವೂರು
6. ಶ್ರೀಮತಿ ಜೊಯ್ಸ್ ಫಿರೇರಾ
7. ಶ್ರೀ ನಾಗೇಂದ್ರ ಮಾಗಡಿ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ಗಣೇಶ್ ಶೆಂಡ್ಯೆ
10. ಡಾ. ಮುರಳೀಧರ ನಾಯಕ್


## ಸಂಚಾಲಕರು


ಶ್ರೀ ಕೆ. ಪುರಂದರ ರಾವ್

# ಸೆಲ್ಕೋ ಫೌಂಡೇಶನ್‌ನಿಂದ 25 ಮಂದಿ ಅರ್ಹ ಫಲಾನುಭವಿಗಳಿಗೆ ಸೋಲಾರ್ ಕಿಟ್‌ಗಳ ಹಸ್ತಾಂತರ




ಕೊಕ್ಕಡ (ಆ.12) : ಸೆಲ್ಕೋ ಫೌಂಡೇಶನ್, ಬೆಂಗಳೂರು ಮತ್ತು ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್ ಇದರ ಯೋಜನೆಯಡಿಯಲ್ಲಿ ಸೌತಡ್ಕದ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಆಗಸ್ಟ್ 12 ರಂದು ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್‌ನ DGM ಶ್ರೀ ಗುರುಪ್ರಕಾಶ್ ಶೆಟ್ಟಿ ಸಾಂಕೇತಿಕವಾಗಿ ಸೋಲಾರ್ ಪೆನಲ್ ಅನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಅವರಿಗೆ ಹಸ್ತಾಂತರಿಸಿದರು.

ಶ್ರೀ ಗುರುಪ್ರಕಾಶ್ ಶೆಟ್ಟಿ ಇವರು ಬಡಜನರನ್ನು ತಲುಪುವಲ್ಲಿ ಸೆಲ್ಕೋ ಮಹತ್ವದ ಪಾತ್ರವನ್ನು ಹೊಂದಿದೆ. ಸೋಲಾರ್ ಅನ್ನು ಜೀವನೋಪಾಯದ ಕಡೆಗೆ ವಿಸ್ತರಿಸುವ ಬಗ್ಗೆ ಉದ್ದೇಶವನ್ನು ಹೊಂದಿದ್ದು 18 ಜೀವನೋಪಾಯದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಿದೆ ಮತ್ತು ಎಲ್ಲಾ ದಿವ್ಯಾಂಗರು ಇದರ ಸದುಪಯೋಗವನ್ನು ಪಡೆದುಕೊಂಡು ನೆಮ್ಮದಿಯ ಬಾಳನ್ನು ಬದುಕುಬೇಕು ಎಂದು ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಬೆಳ್ತಂಗಡಿ ರೋಟರಿ ಕ್ಲಬ್‌ನ ಕಾರ್ಯದರ್ಶಿ ರೊ। ಸಂದೇಶ್ ಕುಮಾರ್ ರಾವ್, ಕೊಕ್ಕಡ ಶ್ರೀ ಮಹಾಗಣಪತಿ ಸೇವಾಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಕೃಷ್ಣ ಭಟ್, ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್, ಸೆಲ್ಕೋ ಏರಿಯಾ ಮ್ಯಾನೇಜರ್ ಶ್ರೀ ಸಂಜಿತ್ ರೈ ಮತ್ತು ಬೆಳ್ತಂಗಡಿಯ ಬ್ರಾಂಚ್ ಮ್ಯಾನೇಜರ್ ಶ್ರೀ ನವೀನ್ ಕುಮಾರ್ ಜಿ. ಹಾಗೂ ದುರ್ಗಾ ಮಾತೃಮಂಡಳಿಯ ಅಧ್ಯಕ್ಷೆ ಶ್ರೀಮತಿ ಶಾಂತಾ ಪಿ ಶೆಟ್ಟಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಸೇವಾಭಾರತಿ ನೀರ್ಚಾಲು ಸಂಸ್ಥೆಗೆ ವೈದ್ಯಕೀಯ ಪರಿಕರಗಳ ಹಸ್ತಾಂತರ






**ಸೇವಾಭಾರತಿ ನೀರ್ಚಾಲು ವತಿಯಿಂದ ಬದಿಯಡ್ಕ ಪಂಚಾಯತ್‌ನ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದವರ ಅಶಕ್ತರಿಗೆ, ಸಮಾಜದಲ್ಲಿ ಅನಾರೋಗ್ಯದಿಂದ ಮಲಗುತ್ತಿದ್ದು ದಿನನಿತ್ಯ ಕರ್ಮಗಳಿಗೆ ಪರದಾಡು–ತ್ತಿರುವಂತಹ ರೋಗಿಗಳಿಗೆ ಸಹಾಯಕವಾಗುವ ಉಪಕರಣಗಳನ್ನು ನೀಡುವುದು, ಅಲೆದಾಡುತ್ತಿರುವ ಮಾನಸಿಕ ಅಸ್ವಸ್ಥರನ್ನು ಸೇವಾಭಾರತಿ ಆಂಬುಲೆನ್ಸ್‌ನ ಮೂಲಕ ಸಂಬಂಧ–ಪಟ್ಟ ಆಸ್ಪತ್ರೆಗಳಿಗೆ ದಾಖಲಿಸುವುದು, ಅಶಕ್ತರಿಗೆ ಔಷಧಿಗಳನ್ನು ತಲುಪಿಸು–ವುದು, ಅಸಹಾಯಕರಿಗೆ ಮನೆ ರಿಪೇರಿ ಮಾಡಿಕೊಡುವುದು ಹಾಗೂ ಶವದಹನ ಪೆಟ್ಟಿಗೆಯನ್ನು ಅಶಕ್ತರಿಗೆ ಉಚಿತ ಕಾರ್ಯಕರ್ತರ ಶ್ರಮದಾನ ಸೇವೆಯೊಂದಿಗೆ ಒದಗಿಸುತ್ತಿದ್ದಾರೆ. ಇದಲ್ಲದೆ ಆರ್ಥಿಕ ಸಹಾಯವನ್ನು, ಆಹಾರ ಸಾಮಗ್ರಿಗಳನ್ನು ದೀನದಲಿತ–ರಿಗೆ ಹಂಚುವ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ.**

ಸೌತಡ್ಕದ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಆಗಸ್ಟ್ 15 ರಂದು ಸೇವಾಭಾರತಿ ನೀರ್ಚಾಲು (ರಿ) ಇವರು ಭೇಟಿ ನೀಡಿದ್ದರು. ಇವರಿಗೆ ಸೇವಾಭಾರತಿ–ಸೇವಾಧಾಮ ಸಂಸ್ಥೆಯ ವತಿಯಿಂದ ಬದಿಯಡ್ಕ ಪಂಚಾಯತ್‌ನ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ಅಶಕ್ತರ ನೆರವಿಗಾಗಿ ನಮ್ಮ ಸಂಸ್ಥೆಯ ಮೂಲಕ ವೈದ್ಯಕೀಯ ಪರಿಕರಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಆರ್‌ಎಸ್‌ಎಸ್ ಜಿಲ್ಲಾ ಕಾರ್ಯಕಾರಿಣಿ ಶ್ರೀ ಬಾಲಕೃಷ್ಣ ನೀರ್ಚಾಲು, ಸೇವಾಭಾರತಿ ನೀರ್ಚಾಲು ಘಟಕದ ಅಧ್ಯಕ್ಷರು ಶ್ರೀ ಸದಾಶಿವ ಮಾಸ್ಟರ್ ಬೆಳ, ಸೇವಾಭಾರತಿ ನೀರ್ಚಾಲು ಘಟಕದ ಕಾರ್ಯದರ್ಶಿ ಶ್ರೀ ಪ್ರದೀಪ್ ಕುಮಾರ್ ಬೆಳ, ಖಜಾಂಚಿ ಶ್ರೀ ಬಾಲಸುಬ್ರಹ್ಮಣ್ಯ ಭಟ್ ಮಲ್ಲಡ್ಕ, ಸೇವಾ ಪ್ರಮುಖ್ ಶ್ರೀ ಸತೀಶ್ ಎನಿಯರ್ಪು, ಶ್ರೀ ಅಜಿತ್ ಕುಮಾರ್ ನೀರ್ಚಾಲು ಹಾಗೂ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಉಪಸ್ಥಿತರಿದ್ದರು.

# ಭಾರತೀಯ ಮಜ್ದೂರ್ ಸಂಘದ ರಾಷ್ಟ್ರೀಯ ಪ್ರಮುಖರಿಂದ ಸೇವಾಧಾಮಕ್ಕೆ ಭೇಟಿ




**ಕೊಕ್ಕಡ (ಜುಲೈ.9):** ಸೌತಡ್ಕದ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಜುಲೈ 9 ರಂದು ಭಾರತೀಯ ಮಜ್ದೂರ್ ಸಂಘದ, ಅಖಿಲ ಭಾರತೀಯ ಸಂಘಟನ ಕಾರ್ಯದರ್ಶಿ ಶ್ರೀ ಬಿ. ಸುರೇಂದ್ರನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್.ಎಲ್. ವಿಶ್ವನಾಥ್ ಮತ್ತು ರಾಜ್ಯ ಕಾರ್ಯದರ್ಶಿ ಶ್ರೀ ಜಯರಾಜ್ ಸಾಲ್ಯಾನ್‌ರವರು ಭೇಟಿ ನೀಡಿ ಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿದುಕೊಂಡು ಶುಭಹಾರೈಸಿದರು.

*I dont need easy, I just need possible*

## ಸೇವಾನಿಧಿ ದಾನಿಗಳು

ಶ್ರೀ ಕೆ.ವಿನಾಯಕ ರಾವ್, ಕನ್ಯಾಡಿ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಕಾರ್ತಿಕ್. ಕೆ, ಧರ್ಮಸ್ಥಳ
ಶ್ರೀ ಮಧುಸೂದನ್ ಎಂ.ಜಿ, ಉಜಿರೆ
ಶ್ರೀ ಬಿ. ಪುರಂದರ, ಕನ್ಯಾಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಶ್ರೀ ರಾಮದಾಸ್ ಭಂಡಾರ್ಕರ್, ಹಳೆಪೇಟೆ
ಶ್ರೀ ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ಶ್ರೀಧರ್ ಕೆ.ವಿ, ಉಜಿರೆ
ಶ್ರೀ ಪುರುಷೋತ್ತಮ್ ಡಿ.ಎ, ಧರ್ಮಸ್ಥಳ
ಶ್ರೀ ಸುನಿಲ್ ಕುಮಾರ್ ಜೈನ್, ನೇತ್ರಾವತಿ
ಡಾ. ರಾಮಕೃಷ್ಣ ಭಟ್, ಕನ್ಯಾಡಿ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಜಯಾನಂದ ಎಂ, ಕನ್ಯಾಡಿ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಕು| ಸಂತೃಪ್ತಿ ಫಡ್ಕೆ, ಮುಂಡಾಜೆ
ಶ್ರೀ ಬಾಲಕೃಷ್ಣ ರಾವ್, ಕನ್ಯಾಡಿ
ಶ್ರೀ ಕೆ. ಪುರಂದರ ರಾವ್, ದೊಂಡೋಲೆ
ಶ್ರೀಮತಿ ಜಯಂತಿ ರಾವ್, ದೊಂಡೋಲೆ
ಶ್ರೀ ಸಂತೋಷ್, ಕೊಕ್ಕಡ
ಶ್ರೀ ನಿತಿನ್, ಉಜಿರೆ
ಶ್ರೀ ಸುಹಾಸ್, ಅಲೆಕ್ಕಡಿ
ಶ್ರೀ ಅಕ್ಷಯ್ ಪಾಟಾಲಿ, ಪುತ್ತೂರು
ಶ್ರೀಮತಿ ದಿವ್ಯಪುರಂದರ್, ಬೆಂಗಳೂರು
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಬೇಬಿ ಶ್ರೀ ಬಿಲ್ವಾನಿ, ಉಜಿರೆ
ಶ್ರೀ ಅರವಿಂದ್ ನಾರಾಯಣ, ಧಾರವಾಡ
ಶ್ರೀ ಅರ್ಜುನ್, ತೀರ್ಥಹಳ್ಳಿ
ಶ್ರೀ ಬಾಲಸುಬ್ರಮಣ್ಯ, ಬೆಂಗಳೂರು
ಶ್ರೀ ಅಖಿಲೇಶ್, ಪುತ್ತೂರು
ಶ್ರೀ ಸುರೇಂದ್ರ ಕುಡುವ, ಉಜಿರೆ
ಶ್ರೀ ಸುಹಾಸ್ ಎಸ್. ಗೌಡ, ನಾರಾವಿ
ಶ್ರೀ ಅಜಯ್ ರಾವ್ ಕೆ., ಮಂಗಳೂರು
ಶ್ರೀ ಸುಕೇಶ್, ಪುತ್ತೂರು
ಶ್ರೀ ಪ್ರಿಜೇಶ್, ಧರ್ಮಸ್ಥಳ
ಶ್ರೀ ಜಿ. ಪುಟ್ಟಸ್ವಾಮಿ, ಉಜಿರೆ
ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

## ಆಗಸ್ಟ್ ತಿಂಗಳ ಸೇವಾ ಕಾರ್ಯಗಳು

| | | | |
|---|---|---|---|
| 1. | ಗಾಲಿಕುರ್ಚಿ ವಿತರಣೆ | – | 2 |
| 2. | ವಾಕರ್ ವಿತರಣೆ | – | 5 |
| 3. | ನೀರಿನ ಹಾಸಿಗೆ | – | 1 |
| 3. | ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ | – | 35 |
| 4. | ಗಾಳಿಯ ಹಾಸಿಗೆ | – | 1 |

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಉಜಿರೆ ಹವ್ಯಕ ವಲಯ, ಉಜಿರೆ
ಇಂಪ್ಯಾಕ್ಟ್ ಫೌಂಡೇಶನ್, ಬೆಂಗಳೂರು

## ಮಹನೀಯ ದಾನಿಗಳು

ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಕು| ರಕ್ಷಿತಾ ರಾವ್
ಶ್ರೀ ಎಸ್. ಕೆ. ಮಂಜುನಾಥ್ ಭಟ್
ಶ್ರೀ ಜಯಶಂಕರ್ ಭಟ್, ಪುತ್ತೂರು
ಶ್ರೀ ಗಣೇಶ್ ಗೌಡ ಕಲಾಯಿ, ಕೊಕ್ಕಡ
ಶ್ರೀ ಎಲ್.ಎಸ್. ಶೇಷಾಚಲ ಹೆಗ್ಡೆ, ಬೆಂಗಳೂರು
ಶ್ರೀಮತಿ ರಂಜಿತಾ ರಾವ್ ಕೆ., ದುಬೈ
ಶ್ರೀಮತಿ ಪೂರ್ಣಿಮಾ ಕಿಣಿ, ಕನ್ಯಾಡಿ
ಶ್ರೀ ದುರ್ಗಾ ಮಾತೃಮಂಡಳಿ, ಕನ್ಯಾಡಿ
ಶ್ರೀಮತಿ ಜ್ಯೋತಿಲಕ್ಷ್ಮಿ, ಉಜಿರೆ
ಶ್ರೀ ಗಿರೀಶ್ ಹೆಚ್.ಎನ್, ಬೆಂಗಳೂರು
ಶ್ರೀಮತಿ ತೇಜಾವತಿ, ಕನ್ಯಾಡಿ
ಶ್ರೀ ಆದಿತ್ಯ ಪ್ರಭು, ಕನ್ಯಾಡಿ
ಕು| ಸುಜ್ಞಾ, ತೀರ್ಥಹಳ್ಳಿ

## ಶ್ರೀ ಜನಾರ್ಧನ ಮಹಾಕಾಳಿ ದೇವಸ್ಥಾನ ಅಂಬಲಪಾಡಿಗೆ ಮನವಿ ಪತ್ರ ಸಲ್ಲಿಕೆ

ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ಪುನಶ್ಚೇತನ ಕೇಂದ್ರಕ್ಕೆ ದಿನಸಿ ಸಾಮಗ್ರಿಗಳನ್ನು ಒದಗಿಸಿಕೊಡಬೇಕೆಂಬ ನಿಟ್ಟಿನಲ್ಲಿ ಆಗಸ್ಟ್ 7 ರಂದು ಸೇವಾಭಾರತಿಯ ಟ್ರಸ್ಟಿ ವಿಷ್ಣು ಪ್ರಸಾದ್ ತೆಂಕಿಲ್ಲಾಯ, ಮಾರ್ಕೆಟಿಂಗ್ ಮತ್ತು ಧನಸಂಗ್ರಹ ವ್ಯವಸ್ಥಾಪಕ ಆಶ್ರೀತ್ ಸಿ.ಪಿ. ಇವರು ಶ್ರೀ ಜನಾರ್ಧನ ಮಹಾಕಾಳಿ ದೇವಸ್ಥಾನ ಅಂಬಲಪಾಡಿ, ಉಡುಪಿಗೆ ಭೇಟಿನೀಡಿ ಮನವಿಪತ್ರ ನೀಡುವುದರ ಮೂಲಕ ಕೇಳಿಕೊಳ್ಳಲಾಯಿತು.

## ಉಡುಪಿ ಕೋ–ಆಪರೇಟಿವ್ ಸೊಸೈಟಿಗೆ ಮನವಿಪತ್ರ ಸಲ್ಲಿಕೆ

ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ 10 ವಾಕರ್‌ಗಳನ್ನು ನೀಡಿ ಸಹಕರಿಸಬೇಕೆಂಬ ನಿಟ್ಟಿನಲ್ಲಿ ಆಗಸ್ಟ್ 7 ರಂದು ಉಡುಪಿ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಜಯಪ್ರಕಾಶ್ ಕೆದಿಲಾಯ ಇವರನ್ನು ಸೇವಾಭಾರತಿ ಟ್ರಸ್ಟಿ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಮಾರ್ಕೆಟಿಂಗ್ ಮತ್ತು ಧನಸಂಗ್ರಹ ವ್ಯವಸ್ಥಾಪಕ ಆಶ್ರೀತ್ ಸಿ.ಪಿ. ಭೇಟಿಮಾಡಿ ಮನವಿಪತ್ರ ನೀಡಿದರು.

## ಉಡುಪಿ ಜಿಲ್ಲಾ ಸಮಾವೇಶಕ್ಕೆ ಸಹಕಾರ ನೀಡುವಂತೆ ಉಡುಪಿ ಜಿಲ್ಲಾಸ್ಪತ್ರೆಗಳಿಗೆ ಮನವಿಪತ್ರ ಸಲ್ಲಿಕೆ





ಆಗಸ್ಟ್ 3, 4, ಮತ್ತು 5ನೇ ತಾರೀಕಿನಂದು ಉಡುಪಿಯಲ್ಲಿ ನಡೆಯುವ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ ಪ್ರಯುಕ್ತ 3 ದಿನದ ಜಿಲ್ಲಾ ಸಮಾವೇಶ ಮತ್ತು 26ನೇ ಉಚಿತ ವೈದ್ಯಕೀಯ ತಪಾಸಣೆ, ಮಾಹಿತಿ ಹಾಗೂ ಜಾಗೃತಿ ಶಿಬಿರಕ್ಕೆ ಉಡುಪಿ ಜಿಲ್ಲಾಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಅಶೋಕ್ ಎಚ್. ಅವರಲ್ಲಿ ತಮ್ಮ ಜಿಲ್ಲಾಸ್ಪತ್ರೆಯಲ್ಲಿ ಮೂರು ದಿನದ ಶಿಬಿರವನ್ನು ನಡೆಸಿಕೊಡಲು ಅನುವು ಮಾಡಿಕೊಡ–ಬೇಕೆಂದು ಹಾಗೇ ಜಿಲ್ಲಾ ಆಯುಷ್ ಕಚೇರಿಯ ಡಾ. ಸತೀಶ್ ಆಚಾರ್ಯರವರಲ್ಲಿ ಶಿಬಿರಕ್ಕೆ 2 ದಿನದ ವಸತಿ ಸೌಕರ್ಯಗಳನ್ನು ನೀಡುವಂತೆ ಹಾಗೂ ಜಿಲ್ಲಾ ಮೆಡಿಕಲ್ ಕಚೇರಿಯ ಡಾ. ದಿನಕರನ್ ಡೋಂಗ್ರೆಯವರಲ್ಲಿ ಶಿಬಿರಕ್ಕೆ ಸಹಕಾರ ನೀಡುವಂತೆ ನಮ್ಮ ಸಂಸ್ಥೆಯಿಂದ ಮನವಿ ಮಾಡಲಾಯಿತು.

ಆಸ್ಪತ್ರೆಯಿಂದ 3 ದಿನದ ಶಿಬಿರಕ್ಕೆ ಸಂಪೂರ್ಣ ಸಹಕಾರವನ್ನು ನೀಡಲು ಒಪ್ಪಿರುತ್ತಾರೆ.

ಈ ಸಂದರ್ಭದಲ್ಲಿ ಸೇವಾಭಾರತಿಯ ಟ್ರಸ್ಟಿ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಸಲಹಾ ಸಮಿತಿಯ ಸದಸ್ಯರು ವಿಜಯ ಕೊಡವೂರು ಹಾಗೂ ಮಾರ್ಕೆಟಿಂಗ್ ಮತ್ತು ಧನಸಂಗ್ರಹ ವ್ಯವಸ್ಥಾಪಕ ಆಶ್ರಿತ್ ಸಿ.ಪಿ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶಶಾಂತ್ ಹಾಗೂ ನಾಗರಾಜು ಉಪಸ್ಥಿತರಿದ್ದರು.



## ಸೇವಾಧಾಮದಲ್ಲಿ ಒತ್ತಡ ನಿರ್ವಹಣೆ ಬಗ್ಗೆ ಸಂವಾದಾತ್ಮಕ ಕಾರ್ಯಾಗಾರ





ಸೇವಾಧಾಮ ಪುನಶ್ಚೇತನ ಕೇಂದ್ರ ಸೌತಡ್ಕದಲ್ಲಿ ನಡೆದ 'ಸಿಬ್ಬಂದಿಗಳ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದ ಅಡಿಯಲ್ಲಿ "ಒತ್ತಡ ನಿರ್ವಹಣೆ" (Stress Management) ಕುರಿತು ಸಂವಾದಾತ್ಮಕ ಕಾರ್ಯಾಗಾರ ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಎಸ್‌ಡಿಎಂ ಕಾಲೇಜು, ಉಜಿರೆಯ, ಮನೋವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ। ವಂದನ ಜೈನ್ ಕೇಂದ್ರದ ಸನಿವಾಸಿಗಳಿಗೆ ಹಾಗೂ ಆರೈಕೆದಾರರಿಗೆ, ಸಿಬ್ಬಂದಿವರ್ಗದವರಿಗೆ ಮಾಹಿತಿ ಇತ್ತರು.

ಇತ್ತೀಚಿನ ತಂತ್ರಜ್ಞಾನ ಯುಗದಲ್ಲಿ ಒತ್ತಡ ನಿರ್ವಹಣೆ ಒಂದು ಅವಿಭಾಜ್ಯ ಅಂಗವಾಗಿದೆ. ಕೆಲಸದ ಒತ್ತಡ ಮತ್ತು ವೈಯಕ್ತಿಕ ಬದುಕು ಇದನ್ನು ಹೇಗೆ ಸಮತೋಲನ ಮಾಡಿಕೊಳ್ಳಬಹುದು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿದರು. ಸಂಸ್ಥೆಯ ಪರವಾಗಿ ಅವರನ್ನು ಗೌರವಿಸಿ, ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿಯ ಕೇಂದ್ರದ ಸನಿವಾಸಿಗಳು ಹಾಗೂ ಆರೈಕೆದಾರರು, ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ಸೇವಾಧಾಮದ ಫಿಸಿಯೋಥೆರಪಿಸ್ಟ್ ಡಾ. ಸುರಕ್ಷಾ ಡಿ.ಪಿ. ಸ್ವಾಗತಿಸಿ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶಶಾಂತ್ ನಿರೂಪಣೆ ಮಾಡಿ ಧನ್ಯವಾದವಿತ್ತರು.

## ಕನ್ಯಾಡಿಯಲ್ಲಿ ಸಾಮೂಹಿಕ ಶ್ರೀ ವರಮಹಾಲಕ್ಷ್ಮೀ ವ್ರತ ಪೂಜೆ





ಶ್ರೀ ದುರ್ಗಾ ಮಾತೃಮಂಡಳಿ ಕನ್ಯಾಡಿ ಇದರ ವತಿಯಿಂದ ಸಾಮೂಹಿಕ ಶ್ರೀ ವರ ಮಹಾಲಕ್ಷ್ಮೀ ವ್ರತ ಪೂಜೆಯು ಕನ್ಯಾಡಿಯ ಉನ್ನತಿಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಗಸ್ಟ್ 16 ರಂದು ನಡೆಸಲಾಯಿತು.

## ಆಗಸ್ಟ್ ತಿಂಗಳಲ್ಲಿ ಉಚಿತ ಮತ್ತು ರಿಯಾಯಿತಿ ದರದಲ್ಲಿ ವಾಕರ್ ವಿತರಣೆ


ಶ್ರೀ ಅಶ್ರಫ್, ಲಾಯಿಲ


ಶ್ರೀ ಶ್ರೀನಿವಾಸ್, ಪೆರುವಾಜೆ


ಶ್ರೀ ಶಶಿಧರ್ ಪೂಜಾರಿ, ಮುಕುಂದೂರ್


ಶ್ರೀ ಪ್ರಶಾಂತ್ ತಾವ್ರೋ

## ಪುಂಜಾಲಕಟ್ಟೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಾಗಾರ




ಸೇವಾಭಾರತಿ –ಸೇವಾಧಾಮದ ವತಿಯಿಂದ ಪುಂಜಾಲಕಟ್ಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ಆಗಸ್ಟ್ 16 ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳು ಹಾಗೂ ಬೆನ್ನುಹುರಿ ಅಪಘಾತ ತಡೆಯಲು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ, "Yes To Access" ಮತ್ತು ಸ್ವಯಂ ಸೇವಕರಾಗಿ ಸಂಸ್ಥೆಗೆ ಸೇವೆಯನ್ನು ಸಹ ಸಲ್ಲಿಸಬಹುದು ಎಂಬ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಘಟಕ, ಯುವ ರೆಡ್‌ಕ್ರಾಸ್ ಘಟಕ, ಸ್ಕೌಟ್ಸ್ ಮತ್ತು ಗೈಡ್ಸ್, ರೇಂಜರ್ಸ್ ಮತ್ತು ರೋವರ್ಸ್ ಘಟಕದವರು ಒಟ್ಟು 109 ವಿದ್ಯಾರ್ಥಿಗಳು ಜಾಗೃತಿ ಕಾರ್ಯಕಾರದಲ್ಲಿ ಭಾಗವಹಿಸಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಮಾಧವ ಎಂ, ಕಾಲೇಜಿನ ಅಧ್ಯಾಪಕರು, ಸೇವಾಭಾರತಿ–ಸೇವಾಧಾಮ ವೆಲ್‌ವಿಶರ್ ಶ್ರೀ ಆರ್. ಮಾರ್ಷಲ್ ವೆಗಾಸ್ (ಬೆನ್ನುಹುರಿಯ ಗಾಯದ ವ್ಯಕ್ತಿ), ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್, ಕ್ಷೇತ್ರ ಸಂಯೋಜನ ಅಧಿಕಾರಿ ಶ್ರೀ ಕುಸುಮಾಧರ ಮತ್ತು ಶ್ರೀ ನಾಗರಾಜ ಉಪಸ್ಥಿತರಿದ್ದರು.


ಶ್ರೀ ದಿನೇಶ್, ಪುತ್ತೂರು

*Life would be tragic if it weren't funny*

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನ್ನ ಹೆಸರು ಚಂದ್ರಶೇಖರ ಗೌಡ ಕೊಂದೋಡಿ ಮನೆ, ಕಡಿರುದ್ಯಾವರ ಗ್ರಾಮ, ಬೆಳ್ತಂಗಡಿ ತಾಲೂಕು, ದಕ್ಷಿಣಕನ್ನಡ ಜಿಲ್ಲೆ. ನಾನು ದಿನಾಂಕ 22/03/2024 ರಂದು ಮಾವಿನ ಮರದಿಂದ ಬಿದ್ದು ಬೆನ್ನುಮೂಳೆ ಮುರಿತಕ್ಕೊಳಗಾಗಿದ್ದೆ. ನಂತರ SDM ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಮನೆಯಲ್ಲಿ ವೈದ್ಯರು ಹೇಳಿದಂತೆ ಕೆಲವು ವ್ಯಾಯಾಮವನ್ನು 10 ತಿಂಗಳವರೆಗೆ ಮಾಡಿರುತ್ತೇನೆ. ನಂತರ SDM ಆಸ್ಪತ್ರೆಯಿಂದ 4 ತಿಂಗಳವರೆಗೆ ಥೆರಪಿಸ್ಟ್ ಬಂದು ಹಲವು ತರಹದ ಕಾಲಿಗೆ ಮತ್ತು ಕೈಗೆ ವ್ಯಾಯಾಮಗಳನ್ನು ಮಾಡಲು ಹೇಳಿಕೊಟ್ಟರು. ವಾಕರ್ ಹಿಡಿದು ನಿಲ್ಲುವ ಹಂತಕ್ಕೆ ಬಂದೆನು. ಆಸ್ಪತ್ರೆಯಲ್ಲಿ ವೈದ್ಯರು ಬಾಲಕೃಷ್ಣರವರ ನಂಬರ್ ಕೊಟ್ಟರು ಅವರನ್ನು ಭೇಟಿಮಾಡಿದ ನಂತರ ಶ್ರೀ ಬಾಲಕೃಷ್ಣರವರು ಸಂಸ್ಥೆಯ ಬಗ್ಗೆ ಮಾಹಿತಿ ಕೊಟ್ಟರು. ಅವರ ಮೂಲಕ ಸೌತಡ್ಕ ಸೇವಾಧಾಮಕ್ಕೆ ಬಂದಿರುತ್ತೇನೆ. ನಾನು ಸೌತಡ್ಕ ಸೇವಾಧಾಮಕ್ಕೆ ಬರುವಾಗ ಕೈಗೆ ಬಲ ಇರಲಿಲ್ಲ ಕಾಲಿಗೆ ಸೊಂಟಕ್ಕೆ ಬಲ ಇರದೆ ವಾಕರ್ ಹಿಡಿದು ನಡೆದಾಡಲು ಆಗುತ್ತಿರಲಿಲ್ಲ ಈಗ ಮೂರು ತಿಂಗಳಲ್ಲಿ ನಾನು ತುಂಬಾ ಸುಧಾರಿಸಿಕೊಂಡಿದ್ದೇನೆ. ಇದು ನನಗೆ ಬಹಳ ಸಂತೋಷವನ್ನು ತಂದುಕೊಟ್ಟಿದೆ. ಮೊದಲು ಎರಡು ಸ್ಟಿಕ್ ಹಿಡಿದು ನಡೆದಾಡಲು ಪ್ರಯತ್ನ ಮಾಡಿದೆ. ನಂತರ ಒಂದು ಸ್ಟಿಕ್ ಹಿಡಿದು ನಡೆದಾಡಲು ಪ್ರಯತ್ನ ಮಾಡಿ ಅದರಲ್ಲಿ ಈಗ ನಡೆಯುತ್ತಿದ್ದೇನೆ. ಈಗ ನನ್ನ ಇಂಜುರಿ ಲೆವೆಲ್ L1/C ಆಗಿರುತ್ತದೆ. ನನಗೆ ಸೇವಾಧಾಮದಲ್ಲಿ ಇರಲು ಅವಕಾಶ ಮಾಡಿಕೊಟ್ಟ ಶ್ರೀ ವಿನಾಯಕ ರಾವ್ ಮತ್ತು ಎಲ್ಲಾ ಸಿಬ್ಬಂದಿವರ್ಗದವರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು.

ಇತಿ ನಿಮ್ಮವರು

**ಚಂದ್ರಶೇಖರ**

## ಆಗಸ್ಟ್ ತಿಂಗಳಲ್ಲಿ ಉಚಿತ ಮತ್ತು ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ




ಶ್ರೀ ರಾಜನ್, ಪೈಯನೂರು ಕೇರಳ



ಶ್ರೀ ನಿಶಾಂತ್, ಅಜ್ಜಾವರ

## ಸೇವಾ ಸಂಗಮ
## ಆನ್‌ಲೈನ್ ಕಾರ್ಯಗಾರ






ಆಗಸ್ಟ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ರೋಸ್ಲಿನ್ ಮೇರಿ, ಅಸೋಸಿಯೇಟ್ ಮ್ಯಾನೇಜರ್, ಎನೇಬಲ್ ಇಂಡಿಯಾ. ಹಾಗೂ ಸೋಮಾ ಬ್ಯಾನರ್ಜಿ, ಹಿರಿಯ ವ್ಯವಸ್ಥಾಪಕಿ, ಎನೇಬಲ್ ಇಂಡಿಯಾ ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಮ್ಮ ವಾಣಿ ಸರಳ ಮಾಧ್ಯಮದ ಮೂಲಕ ಸ್ವಉದ್ಯೋಗವನ್ನು ಕಲ್ಪಿಸಿ ಮುಖ್ಯವಾಹಿನಿಗೆ ಕರೆತರುವ ಉದ್ದೇಶ ಮತ್ತು ಪ್ರಾಜೆಕ್ಟ್ ಡಿಸ್ಕವರಿ ಯೋಜನೆಯಡಿಯಲ್ಲಿ ತಾವು ಸ್ವತಂತ್ರರಾಗಿರಲು ಮತ್ತು ಎಲ್ಲಾ ಅಡೆತಡೆಗಳನ್ನು ಮೀರಿ ಹೊರಬರಲು ಇರುವ ಪರಿಹಾರಗಳ ಕುರಿತು ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 70 ಮಂದಿ ಭಾಗವಹಿಸಿದ್ದರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...




ಶ್ರೀ ಚಿತ್ರೇಶ್ ಶೆಟ್ಟಿ
ಉಜಿರೆ



ಕು। ಸುಜ್ಞಾ
ತೀರ್ಥಹಳ್ಳಿ



ಡಾ। ವಂದನಾ ಜೈನ್
ಗುರುವಾಯನಕೆರೆ



ಶ್ರೀ ಗಣೇಶ್ ವಿ. ಶೆಂಡ್ಯೆ
ಉಜಿರೆ



ಶ್ರೀ ಮಧ್ವರಾಜ್
ಧರ್ಮಸ್ಥಳ



ಶ್ರೀ ಪ್ರಜ್ವಲ್ ವಿ.ಜೆ.
ಕಿಲ್ಲೂರು



ಶ್ರೀ ಶಶಾಂತ್
ಉಡುಪಿ



ಶ್ರೀ ಸುಕೇಶ್
ಪುತ್ತೂರು



ರೊ। ಪೂರನ್ ವರ್ಮ
ಬೆಳ್ತಂಗಡಿ



ಶ್ರೀಮತಿ ತೇಜಾವತಿ
ಕನ್ಯಾಡಿ



ಶ್ರೀ ಶರತ್‌ಕೃಷ್ಣ ಪಡುವೆಟ್ನಾಯ
ಉಜಿರೆ



ಶ್ರೀ ಗಿರೀಶ್
ಬೆಂಗಳೂರು



ಶ್ರೀ ಹರೀಶ್ ಪೂಂಜಾ
ಬೆಳ್ತಂಗಡಿ



ಶ್ರೀ ಚೈತ್ರೇಶ್
ಇಳಂತಿಲ



ಶ್ರೀಮತಿ ಸ್ವರ್ಣಗೌರಿ
ಧರ್ಮಸ್ಥಳ



ಶ್ರೀ ರಾಘವೇಂದ್ರ ಶಾಸ್ತ್ರಿ
ಧರ್ಮಸ್ಥಳ



ಬೇಬಿ ವಿಹಾನ
ನಿಡ್ಲೆ



ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ

*Disability cannot stop me from becoming a complete personality*

## ನಿಮಗಿದು ತಿಳಿದಿರಲಿ

ಮಾನವನಿಗೆ ಜೀವಿಸಲು ಆಹಾರ ಎಷ್ಟು ಮುಖ್ಯವೋ ಹಾಗೆಯೇ ಬೆನ್ನುಹುರಿ ಅಪಘಾತವಾದ ವ್ಯಕ್ತಿಗಳಿಗೆ ದೈಹಿಕ ವ್ಯಾಯಾಮ ಅಷ್ಟೇ ಮುಖ್ಯ. ಏಕೆಂದರೆ ಒಂದು ಸಾರಿ ಆಕಸ್ಮಿಕ ಘಟನೆಗಳಿಂದ ಬೆನ್ನುಹುರಿಗೆ ಅಪಘಾತವಾದ ಮೇಲೆ ಇವರು ಮೊದಲಿನಂತೆ ಆಗಲು ಸಾಧ್ಯವಿಲ್ಲ ಇದರ ಸ್ವತಂತ್ರ ಚಲನೆಗೆ ಮತ್ತು ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಲು ಪ್ರತಿನಿತ್ಯ ದೈಹಿಕ ವ್ಯಾಯಾಮದ ಅವಶ್ಯಕತೆಯಿದ್ದು, ಇನ್ನು ನುರಿತ ತಜ್ಞರ ಮಾರ್ಗದರ್ಶನ ಮೂಲಕ ಪಡೆದುಕೊಳ್ಳಬಹುದು. ಅಲ್ಲದೆ ಸಾಮಾಜಿಕ ಪುನಶ್ಚೇತನ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆದುಕೊಳ್ಳುವುದರ ಮೂಲಕ ತಾವೇ ನಿರ್ವಹಿಸಿಕೊಳ್ಳಬಹುದು.

## ದೈಹಿಕ ವ್ಯಾಯಾಮ ಮತ್ತು ಅದರ ಮಹತ್ವ

**ವ್ಯಾಯಾಮ ಮಾಡದಿದ್ದರೆ ಬರುವ ತೊಂದರೆಗಳು:**

1) ರಕ್ತ ಪರಿಚಲನೆ ಕಡಿಮೆಯಾಗಿ ಮಾಂಸಖಂಡ ಮತ್ತು ಮೂಳೆಗಳಲ್ಲಿ ನಿಶ್ಯಕ್ತಿ ಉಂಟಾಗುತ್ತದೆ.
2) ಕುಳಿತುಕೊಳ್ಳುವ ಮತ್ತು ನಿಲ್ಲುವ ಸಮತೋಲನೆಯಿರುವುದಿಲ್ಲ.
3) ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸಲು ಸಾಧ್ಯವಿಲ್ಲ
4) ದೇಹದ ತೂಕ ಮತ್ತು ಕಾಲುಗಳ ಆಕಾರದಲ್ಲಿ ವ್ಯತ್ಯಾಸ ಉಂಟಾಗುತ್ತದೆ
5) ಕಾಲುಗಳಲ್ಲಿ ನಡುಕ, ಸೆಳೆತ, ಕೀಲುಗಳಲ್ಲಿ ಬಿಗಿತನ ಮತ್ತು ಚರ್ಮದ ಸಮಸ್ಯೆಗಳು ಕಂಡುಬರುತ್ತದೆ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 02462200019623 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಜೀವನ ರೂಪಿಸಿದ ಪುರೋಹಿತ ವೃತ್ತಿ





**ಕಾಯಕವೇ ಕೈಲಾಸ ಎಂಬಂತೆ ತನ್ನ ಕೆಲಸವನ್ನು ಮಾಡುತ್ತಾ ಅಮೂಲ್ಯವಾದ ಜೀವನವನ್ನು ಕಳೆಯುತ್ತಿದ್ದ ವ್ಯಕ್ತಿಯು ರಸ್ತೆ ಅಪಘಾತವಾಗಿ ಬೆನ್ನುಹುರಿ ಅಪಘಾತಕ್ಕೊಳಗಾಗಿ ಮತ್ತೆ ಬದುಕು ಕಟ್ಟಿಕೊಂಡ ಬಂಟ್ವಾಳದ ಮಣಿ ನಾಲ್ಕೂರು ಗ್ರಾಮದ ವೀರೇಂದ್ರ ಭಟ್ ಯಶೋಗಾಥೆ ನಿಮ್ಮ ಮುಂದೆ.**

ವೀರೇಂದ್ರ ಭಟ್ ಬಂಟ್ವಾಳದ ಮಣಿ ನಾಲ್ಕೂರಿನ ಗ್ರಾಮದಲ್ಲಿ 1989 ಆಗಸ್ಟ್ 8 ರಂದು ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅಲ್ಲಿ ಪಾದೆಯಲ್ಲಿ ಮತ್ತು ಎಸ್‌ಎಸ್‌ಎಲ್‌ಸಿ ಶಿಕ್ಷಣವನ್ನು ಮಣಿ ನಾಲ್ಕೂರಿನಲ್ಲಿ ಪೂರ್ಣಗೊಳಿಸಿದರು. ತದನಂತರ ಗದ್ದೆಯ ಕೆಲಸವನ್ನು ಮಾಡುತ್ತಾ 4–5 ವರ್ಷಗಳವರೆಗೆ ಹೋಟೆಲ್ ಕೆಲಸಕ್ಕೆ ಹೋಗುತ್ತ ತನ್ನ ಜೀವನವನ್ನು ಸಾಗಿಸುತ್ತಿದಂತ ವ್ಯಕ್ತಿ. ನಂತರ ಕಟ್ಟಪಾಡಿಯ ವಿಶ್ವನಾಥ ಕ್ಷೇತ್ರದಲ್ಲಿ ಪುರೋಹಿತವನ್ನು ಕಲಿಯುವಲ್ಲಿ ತನ್ನನ್ನೇ ತಾನು ತೊಡಗಿಸಿಕೊಂಡಿದ್ದರು ಮತ್ತು ತನ್ನ ಜೀವನದುದ್ದಕ್ಕೂ ಪುರೋಹಿತ ಕೆಲಸವನ್ನೇ ಮುಂದುವರಿಸುತ್ತಾ ಹೋದರು. ಕಲ್ಲಡ್ಕದಲ್ಲಿ ಸತ್ಯನಾರಾಯಣ ದೇವರ ಪೂಜೆಯನ್ನು ಮುಗಿಸಿ ಮನೆಗೆ ವಾಪಾಸಾಗುವಾಗ ರಾತ್ರಿ ವೇಳೆಯಲ್ಲಿ ಬೈಕ್‌ಗಳ ನಡುವೆ ನಡೆದ ರಸ್ತೆ ಅಪಘಾತದಲ್ಲಿ ಇವರನ್ನು ಬಂಟ್ವಾಳದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ನಂತರ ಅಲ್ಲಿಂದ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಒಂದು ದಿನಗಳ ಕಾಲ ಚಿಕಿತ್ಸೆ ಪಡೆದು ನಂತರ ಒಂದೂವರೆ ತಿಂಗಳವರೆಗೆ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿದ್ದರೂ. 3 ತಿಂಗಳು ಮಲಗಿಕೊಂಡಲ್ಲೇ ತನ್ನ ಜೀವನವನ್ನು ಸಾಗಿಸುತ್ತಿದ್ದ ವೀರೇಂದ್ರ ಭಟ್ ರವರಿಗೆ ಬೆನ್ನೆಲುಬಾಗಿ ನಿಂತವರು ತನ್ನ ಅಣ್ಣ ರಾಜೇಶ್ ಮತ್ತು ಬಹಳ ಆಪ್ತರಾದ ರಾಮಣ್ಣ ಶ್ಯಾಂತಿ. ಮನೆಯಲ್ಲಿ ಅತಿಯಾದ ಕಷ್ಟ ಇರುವ ಕಾರಣ ಆಸ್ಪತ್ರೆಯಿಂದ ಬಂದ ನಂತರ ಸ್ವಲ್ಪ ಸಮಯದವರೆಗೆ ಆಶ್ರಮದಲ್ಲಿ ಮಲಗಿಕೊಂಡಲ್ಲೇ ಜೀವನ ಸಾಗಿಸಿದರು. ಈ ಸಂದರ್ಭದಲ್ಲಿ ಹರೀಶ್ ಭಟ್‌ರವರ ಮುಖಾಂತರ ಸೇವಾಧಾಮದ ಪರಿಚಯ ಮಾಡಿಕೊಂಡು ಮಾರ್ಚ್ 10ಕ್ಕೆ ಸೇವಾಧಾಮಕ್ಕೆ ಭೇಟಿ ನೀಡಿದರು. 3 ತಿಂಗಳವರೆಗೆ ಪುನಶ್ಚೇತನವನ್ನು ಪಡೆದುಕೊಂಡು ಸೇವಾಧಾಮದಲ್ಲಿ ನೀಡಿದ ವಾಕರ್ ಹಿಡಿದು ಸ್ವಲ್ಪ ಸ್ವಲ್ಪವಾಗಿ ನಡೆದಾಡಲು ಪ್ರಾರಂಭಿಸಿ ಆರೋಗ್ಯದಲ್ಲಿ ಬಹಳಷ್ಟು ಚೇತರಿಸಿಕೊಂಡಿದ್ದೇನೆ ಎಂದು ಸಂತೋಷವನ್ನು ವ್ಯಕ್ತಪಡಿಸಿದರು. ಆರು ತಿಂಗಳ ಕಾಲ ಮನೆಯಲ್ಲೇ ಇದ್ದು ನಂತರ ಚೇತರಿಸಿಕೊಂಡು ಇದೀಗ ತೊಡ್ಲಾಮಜಲು ಚಾಮುಂಡಿ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಪುರೋಹಿತ ಕೆಲಸಕ್ಕೆ ಹೋಗುತ್ತಾ ಎಲ್ಲರಿಗೂ ಮಾದರಿಯಾಗುವಂತೆ ಜೀವನ ಸಾಗಿಸುತ್ತಿದ್ದಾರೆ.